# ಸಿವಿಲ್ ಜೆಡ್ಜ್ ಮತ್ತು ಜೆ .ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು.

## ಸಿ.ಸಿ. ಸಂಖ್ಯೆಃ **397/2020**

ಪಿರ್ಯಾದುದಾರರುಃ - ಸರ್ಕಾರದ ಪರವಾಗಿ
ಹಳೇಬೀಡು ಪೋಲೀಸ್

ವಿರುದ್ಧ

ಆರೋಪಿಃಗಳುಃ

ಕುಮಾರ ಬಿನ್ ಯಾಲಕ್ಕಯ್ಯ,
26 ವರ್ಷ,
ವಡ್ಡರಹಳ್ಳಿ ಕೊಪ್ಪಲು ಗ್ರಾಮ,
ಮಾದೀಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು,
ಹಾಸನ.

## ಃಃ ದೋಷಾರೋಪಣೆ ಃಃ

ಶ್ರೀ ನಾಗೇಂದ್ರ, ಬಿ.ಎ., ಎಲ್ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬೇಲೂರು ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆ.

ದಿನಾಂಕಃ 08.06.2020 ರಂದು ಸಂಜೆ 4.30 ಗಂಟೆ ಸಮಯದಲ್ಲಿ ಹಳೇಬೀಡು ಪೋಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ವಡ್ಡರಹಳ್ಳಿ ಕೊಪ್ಪಲು ಗ್ರಾಮದ ದ್ಯಾವಯ್ಯ ರವರ ಮನೆಯ ಮುಂದೆ ರಸ್ತೆಯಲ್ಲಿ ಚಾಸಾ-1 ಮತ್ತು ಚಾಸಾ2 ರವರು ಕೂಲಿ ಕೆಲಸಕ್ಕೆ ಹೋಗಿದ್ದವರು ನಡೆದುಕೊಂಡು ಬರುತ್ತಿರುವಾಗ ಆರೋಪಿತರಾದ ನೀವು ಚಾಸಾ-1 ಮತ್ತು 2 ರವರನ್ನು ಮುಂದೆ ಹೋಗದಂತೆ ಅಡ್ಡಹಾಕಿ ತೀವ್ರ ಪ್ರತಿಬಂಧವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂಃ 341 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

2. ಎರಡನೇಯದಾಗಿ ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಕೃತ್ಯ ಎಸಗುವ ಏಕೋದ್ದೇಶದಿಂದ ಚಾಸಾ.2 ರವರಿಗೆ ಬೋಳಿ ಮಗನೆ, ಸೂಳೆ ಮಗನೆ ನಾನು ಒಪ್ಪಿಕೊಂಡಿದ್ದ ಕೆಲಸವನ್ನು ನೀನು ಹೋಗಿ ಮಾಡಿಸುತ್ತೀಯಾ ಎಂದು ಶಾಂತಿಭಂಗನ್ನುಂಟು

ಮಾಡುವಂತೆ ಪ್ರೇರೇಪಿಸಲು ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ: 504 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

3. ಮೂರನೇಯದಾಗಿ ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಕೃತ್ಯ ಎಸಗುವ ಏಕೋದ್ದೇಶದಿಂದ ಚಾಸಾ.2 ರವರಿಗೆ ಕೈಯಿಂದ ಮೈಕೈಗೆ, ತಲೆಗೆ ಹೊಡೆದು ಸ್ವಯಂಪ್ರೇರಿತ ಸಾಧಾರಣ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ: 323 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

4. ನಾಲ್ಕನೇಯದಾಗಿ ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಕೃತ್ಯ ಎಸಗುವ ಏಕೋದ್ದೇಶದಿಂದ ಬಾಳೆದಿಂಡಿನಿಂದ ಚಾಸಾ.2 ರವರಿಗೆ ಅಲ್ಲೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಚಾಸಾ-2 ರವರ ಮೂಗು, ಬಾಯಿ ಹತ್ತಿರ ಹೊಡೆದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ: 326 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

5. ಐದನೇಯದಾಗಿ ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಚಾಸಾ-2 ರವರಿಗೆ ಅವಮಾನಿಸುವ ಉದ್ದೇಶದಿಂದ ಚಪ್ಪಲಿಯಿಂದ ಚಾಸಾ-2 ರವರಿಗೆ ಹೊಡೆದು ಆಕ್ರಮಣ ಅಥವಾ ಅಪರಾಧಿಕ ಬಲವನ್ನು ಬಳಸಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ: 355 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

6. ಆರನೇಯದಾಗಿ ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಕೃತ್ಯ ಎಸಗುವ ಏಕೋದ್ದೇಶದಿಂದ ಚಾಸಾ.2 ರವರಿಗೆ ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತೀಯ

ದಂಡ ಸಂಹಿತೆ ಕಲಂಃ 506 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ

ಮೇಲ್ಕಂಡ ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 06-12-2024

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು

**:ಸಿಸಿ ಸಂಖ್ಯೆಃ 397/2020**

**ಆರೋಪಿಯ ಹೆಸರು** ಃ ಕುಮಾರ
**ತಂದೆಃಗಂಡನ ಹೆಸರು** ಃ ಬಿನ್ ಯಾಲಕ್ಕಯ್ಯ,
**ವಯಸ್ಸು** ಃ **26** ವರ್ಷ,
**ವಾಸ ಸ್ಥಳ** ಃ ವಡ್ಡರಹಳ್ಳಿ ಕೊಪ್ಪಲು ಗ್ರಾಮ, ಮಾದೀಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು, ಹಾಸನ.

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆಃ2 ಸದರೀ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ?
ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ **06-12-2024**

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು